# ಜನ ಮೆಚ್ಚಿದ 'ಕರ್ನಾಟಕ ರತ್ನ'

13



ಕನ್ನಡ ಚಿತ್ರರಂಗದ ತಾರಾ ವರ್ಚಸ್ಸಿನ ನಟ ಪುನೀತ್ ರಾಜ್‌ಕುಮಾರ್ ಸಾವು (ಅ. 28) ಕರ್ನಾಟಕದಾಚೆಗೂ ಸುದ್ದಿಯಾಯಿತು. ಸಿನಿಮಾಗಳಿಂದ ಸಾಮಾಜಿಕ ಪರಿಣಾಮ ಸಾಧ್ಯ ಎನ್ನುವ ನಂಬಿಕೆ ಸಿನಿಮಾ ಮಂದಿಯಲ್ಲೇ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ, ಜನಮನವನ್ನು ಉದ್ದೀಪಿಸುವ ಶಕ್ತಿ ಕಲೆ ಮತ್ತು ಕಲಾವಿದನಿಗಿದೆ ಎನ್ನುವುದನ್ನು ಪುನೀತ್ ರಾಜ್‌ಕುಮಾರ್ ಸಾವು ಹೇಳುವಂತಿದೆ.

ಕೌಟುಂಬಿಕ ಮೌಲ್ಯಗಳನ್ನು ಉಳಿಸಿಕೊಂಡೂ ವ್ಯಾಪಾರಿ ಚಿತ್ರಗಳನ್ನು ರೂಪಿಸಬಹುದು ಎನ್ನುವುದನ್ನು ಸಾಬೀತುಪಡಿಸಿದ್ದ ಪುನೀತ್ ರಾಜ್‌ಕುಮಾರ್ ಹೊಸ ತಲೆಮಾರಿನ ಕಲಾವಿದರಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಹೆಚ್ಚು ಇಷ್ಟವಾದ ನಟ. ತೆರೆಯ ಮೇಲೆ ಕಾಣುತ್ತಿದ್ದ ಸಿನಿಮಾ ಪಾತ್ರೆಗಳಾಚೆಗೆ, ತೆರೆಮರೆಯಾಚೆಗೆ ಅವರು ಸಾಮಾಜಿಕ ವ್ಯಕ್ತಿತ್ವವೊಂದನ್ನು ರೂಢಿಸಿಕೊಂಡಿದ್ದುದು ಅವರ ಸಾವಿನ ನಂತರ ಹೆಚ್ಚು ಚರ್ಚೆಯಾಗುತ್ತಿದೆ. ಮಕ್ಕಳ ಶಿಕ್ಷಣ, ಸರ್ಕಾರಿ ಶಾಲೆಗಳಿಗೆ ನೆರವು ಸೇರಿದಂತೆ ತಮ್ಮ ಕುಟುಂಬದ ಎಲ್ಲ ಸಾಮಾಜಿಕ ಚಟುವಟಿಕೆಗಳಿಗೂ ಅಂತರ್ಜಲದಂತೆ ಪುನೀತ್ ಮಾಡಿದ ಕೆಲಸವನ್ನು ಕನ್ನಡ ಸಮಾಜ ಈಗ ಚರ್ಚಿಸುತ್ತಿದೆ. ಸಮಾಜದ ಪ್ರೀತಿಯನ್ನು ಪಡೆದ ಸಾಧಕರಿಗೆ ಇರಬೇಕಾದ ಸಾಮಾಜಿಕ ಹೊಣೆಗಾರಿಕೆಯ ಪ್ರತೀಕದಂತೆ ಪುನೀತ್ ಕಾಣಿಸುತ್ತಿದ್ದಾರೆ. ಈ ಸಾಮಾಜಿಕ ಆಯಾಮದ ಕಾರಣದಿಂದಲೇ ಪುನೀತ್‌ರ ಸಾವಿಗೆ ನಾಡಿಗೆ ನಾಡೇ ಮರುಗಿದೆ.

ದಣಿವರಿಯದ ಉತ್ಸಾಹವೇ ಮೈದಾಳಿದಂತಿದ್ದ, ಮಧ್ಯವಯಸ್ಸಿನಲ್ಲೂ ಮಗುವಿನ ನಗು ಉಳಿಸಿಕೊಂಡಿದ್ದ, ಯುವಜನರ ಪಾಲಿಗೆ ಐಕಾನ್ ಆಗಿದ್ದ ನಟನೊಬ್ಬ ತನ್ನ ನಲವತ್ತಾರನೇ ವಯಸ್ಸಿನಲ್ಲಿ ತೀರಿಕೊಂಡಿದ್ದು ಕೂಡ ಜನರ ಭಾವುಕಸ್ಪಂದನಕ್ಕೆ ಕಾರಣವಾಗಿದೆ. ಇಪ್ಪತ್ತೈದು ಲಕ್ಷಕ್ಕೂ ಹೆಚ್ಚು ಜನ ಅಂತಿಮದರ್ಶನ ಪಡೆದಿರುವುದು ಪುನೀತ್‌ರ ಜನಪ್ರಿಯತೆಗೆ ಉದಾಹರಣೆಯಂತಿದೆ. ಈ ಜನಮನ್ನಣೆಗೆ ಸ್ಪಂದಿಸುವಂತೆ ಕರ್ನಾಟಕ ಸರ್ಕಾರ ಪುನೀತ್‌ರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಿಸಿದೆ. ಪದ್ಮಶ್ರೀ ಪ್ರಶಸ್ತಿಗೆ ಅವರ ಹೆಸರನ್ನು ಶಿಫಾರಸ್ಸು ಮಾಡುವುದಾಗಿಯೂ ಉದ್ದೇಶಿಸಿದೆ.

ಪುನೀತ್ ಅವರಂತೆ ದೇಶವನ್ನು ಕಾಡಿದ ಮತ್ತೊಂದು ಸಾವು ಭಾರತೀಯ ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ಲಕ್ಷ್ಮಣ ಸಿಂಗ್ ರಾವತ್. ಡಿಸೆಂಬರ್ 9ರಂದು ತಮಿಳುನಾಡಿನ ಕೂನೂರು ಬಳಿ ಸಂಭವಿಸಿದ ಹೆಲಿಕಾಪ್ಟರ್ ಅಪಘಾತದಲ್ಲಿ ರಾವತ್ ದುರ್ಮರಣಕ್ಕೆ ಈಡಾಗಿದ್ದು ದೇಶದ ನಾಗರಿಕರನ್ನು ದಿಗ್ಭ್ರಮೆಗೊಳಿಸಿತು.

# 'ಪದ್ಮ' ಪ್ರಶಸ್ತಿಗೆ ಗೌರವ ತಂದವರು

14

ನವೆಂಬರ್ ತಿಂಗಳಲ್ಲಿ ದೆಹಲಿಯಲ್ಲಿ ನಡೆದ 'ಪದ್ಮ ಪ್ರಶಸ್ತಿ'ಗಳ ಪ್ರದಾನ ಸಮಾರಂಭದಲ್ಲಿ 'ಕನ್ನಡ ರಾಜ್ಯೋತ್ಸವ'ದ ಅಪರೋಕ್ಷ ಸೊಗಡಿತ್ತು. ವಿವಿಧ ಕ್ಷೇತ್ರಗಳಿಗೆ ಗಣನೀಯ ಕೊಡುಗೆ ನೀಡಿದ 119 ಸಾಧಕರಿಗೆ ಪದ್ಮ ಪ್ರಶಸ್ತಿಗಳನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಪ್ರದಾನ ಮಾಡಿದರು. ಆ ಸಾಧಕರ ಸಾಲಿನಲ್ಲಿ ಎದ್ದುಕಾಣಿಸಿದ್ದು, ಕರ್ನಾಟಕದ ಮೂವರು – ಹರೇಕಳ ಹಾಜಬ್ಬ, ಮಂಜಮ್ಮ ಜೋಗತಿ ಹಾಗೂ ತುಳಸಿ ಗೌಡ. ಸಮಾಜದ ನಿರ್ಲಕ್ಷಿತ ವಲಯದಿಂದ ಬಂದ ಕರ್ನಾಟಕದ ಈ ಅಸಾಮಾನ್ಯ ಸಾಧಕರು ಕಾರ್ಯಕ್ರಮದ ಕೇಂದ್ರಬಿಂದುಗಳಾಗಿದ್ದರು ಹಾಗೂ 'ಪದ್ಮ ಪ್ರಶಸ್ತಿ'ಗಳಿಗೆ ಹೊಸ ವರ್ಚಸ್ಸು ತರುವ ಮೂಲಕ ದೇಶದ ಗಮನಸೆಳೆದರು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಹೊನ್ನಳ್ಳಿಯ ತುಳಸಿಗೌಡ 'ವೃಕ್ಷಮಾತೆ' ಎನ್ನಿಸಿಕೊಂಡವರು. ಹಾಲಕ್ಕಿ ಸಮುದಾಯದ ಅವರು ಲಕ್ಷಾಂತರ ಮರಗಳ ತಾಯಿ. ಮತ್ತಿಘಟ್ಟ ಅರಣ್ಯ ನರ್ಸರಿಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವ ತುಳಸಿಯಜ್ಜಿ, ಈಗ ಎಪ್ಪತ್ತರೆಡರ ವಯಸ್ಸಿನಲ್ಲೂ ಹಸಿರು–ಚಿಗುರು ಕಾಯಕದಲ್ಲಿ ತೊಡಗಿಕೊಂಡವರು. ಎಳೆಯ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ ಅವರು, ಮರಗಿಡಗಳ ಬೆಳವಣಿಗೆಯಲ್ಲಿ ಬದುಕಿನ ಸಾರ್ಥಕತೆ ಕಂಡವರು. ನಂದಿ, ಬಿದಿರು, ಗೋಡಂಬಿ, ಮಾವು, ಹಲಸು, ಜಾಯಿಕಾಯಿ ಸೇರಿದಂತೆ ಹಲವು ಜಾತಿಯ ಅಸಂಖ್ಯ ಮರಗಳು ತುಳಸಿ ಅವರ ಸಾಧನೆಗೆ ನಿದರ್ಶನವಾಗಿ ನಿಂತಿವೆ.

ದಕ್ಷಿಣ ಕನ್ನಡದ ಹರೇಕಳದ ಹಾಜಬ್ಬನವರದು ಬುಟ್ಟಿಯಲ್ಲಿ ಕಿತ್ತಳೆ ಹಣ್ಣು ಹೊತ್ತು ಮಾರುವ ವೃತ್ತಿ. ಹಣ್ಣು ಮಾರುವ ಹಾಜಬ್ಬನವರು ಕಂಡದ್ದು ತಮ್ಮೂರಿನಲ್ಲಿ ಶಾಲೆ ರೂಪಿಸುವ ಕನಸು. ಕಾಸಿಗೆ ಕಾಸು ಕೂಡಿಸಿ, ಸಹೃದಯರಿಂದ ಹಣ ಸಂಗ್ರಹಿಸಿ, ಕಚೇರಿಯಿಂದ ಕಚೇರಿಗೆ ಅಲೆದು, ಹಾಜಬ್ಬನವರ ಭಗೀರಥ ಶ್ರಮದ ಫಲವಾಗಿ ಅವರ ಊರಿನಲ್ಲಿ ಶಾಲೆ ರೂಪುಗೊಂಡಿದೆ. ಹರೇಕಳದಲ್ಲೀಗ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಹಾಜಬ್ಬನವರ ಯಶೋಗಾಥೆಯನ್ನು ಉಸುರುವಂತೆ ಸಕ್ರಿಯವಾಗಿವೆ. ಈ 'ಅಕ್ಷರಸಂತ'ನಿಗೀಗ ತಮ್ಮೂರಿಗೆ ಕಾಲೇಜನ್ನು ತರುವ ಕನಸು.

ಬಳ್ಳಾರಿ ಜಿಲ್ಲೆಯ ತಗ್ಗಿನಮಠ ಎನ್ನುವ ಊರಿನಲ್ಲಿ ಜನಿಸಿದ ಮಂಜುನಾಥಶೆಟ್ಟಿ ಎನ್ನುವ ಹುಡುಗ, ಮಂಜಮ್ಮ ಜೋಗತಿಯಾದುದು ಕಲ್ಲರಳಿ ಹೂವಾದಂತಹ ಒಂದು ಕಥೆ. ಎದುರಾದ ಸಂಕಷ್ಟಗಳಿಗೆ ಎದೆಗುಂದದೆ ಘನತೆಯ ಬದುಕನ್ನು ರೂಪಿಸಿಕೊಂಡಿರುವ ಮಂಜಮ್ಮ ಜೋಗತಿ ಅವರು ಜೋಗತಿ ವೃತ್ತಿಗೆ ಗೌರವ ತಂದವರು. ಕುಟುಂಬ ಹಾಗೂ ಸಮಾಜದಿಂದ ಕಡೆಗಣನೆಗೆ ಒಳಗಾದರೂ ತಮಗೊಲಿದ ಕಲೆಯನ್ನೇ ಊರುಗೋಲನ್ನಾಗಿ, ಏಣಿಯನ್ನಾಗಿ ಮಾಡಿಕೊಂಡವರು ಮಂಜಮ್ಮ. ಅವರ ಜನಪದ ನೃತ್ಯಕ್ಕೆ ಜಾತ್ರೆಯಾದರೂ ಸೈ, ಸಂತೆಯಾದರೂ ಸೈ. ಈವರೆಗೆ ಸಾವಿರಾರು ಪ್ರದರ್ಶನಗಳನ್ನು ನೀಡಿರುವ ಅವರು, ಪ್ರಸ್ತುತ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರು.



ಹರೇಕಳ ಹಾಜಬ್ಬ



ತುಳಸೀ ಗೌಡ



ಮಂಜಮ್ಮ ಜೋಗತಿ